# ಪ್ರಾಮಾಣಿಕತೆಯ ಪರೀಕ್ಷೆ



ಗಾಡೇನಹಳ್ಳಿಯ ಚರ್ಚು ಸುತ್ತಮುತ್ತಲ ಗ್ರಾಮಗಳಲ್ಲೆಲ್ಲಾ ತುಂಬಾ ಪ್ರಸಿದ್ಧಿಯನ್ನು ಪಡೆದಿತ್ತು. ಚರ್ಚು ಬಡವರಿಗಾಗಿ ಔಷಧಾಲಯ, ಅನಾಥಾಶ್ರಮ, ಗಂಜಿಕೇಂದ್ರ ಮೊದಲಾದವುಗಳನ್ನು ನಡೆಸುತ್ತಿತ್ತು. ಫಾದರ್ ಡಿಸೋಜಾರವರು ಅದರ ಮೇಲ್ವಿಚಾರಣೆಯನ್ನು ಶಿಸ್ತಿನಿಂದ ನಡೆಸಿಕೊಂಡು ಬರುತ್ತಿದ್ದರು.

ಆ ಊರಿನ ಜಮೀನುದಾರರಾದ ಜಾರ್ಜ್‌ರವರ ಮಗನಿಗೆ ಮದುವೆ ನಿಶ್ಚಯವಾಯಿತು. ಆದ್ದರಿಂದ ಹೆಚ್ಚುವರಿ ಕೆಲಸಕ್ಕಾಗಿ ಅನಾಥಾಶ್ರಮದ ಹುಡುಗಿಯನ್ನು ಗೊತ್ತು ಮಾಡಿಕೊಳ್ಳುವ ಉದ್ದೇಶದಿಂದ ಜಾರ್ಜ್ ಫಾದರ್ ಡಿಸೋಜಾರವರನ್ನು ಬಂದು ಕೇಳಿಕೊಂಡರು. ಅನಾಥಾಶ್ರಮದಲ್ಲಿ ರೋಸಿ, ಲಿಲ್ಲಿ, ರೂಬಿ ಎಂಬ ಒಂದೇ ವಾರಿಗೆಯ ಹುಡುಗಿಯರಿದ್ದರು. ಅವರಲ್ಲಿ ಒಬ್ಬಳನ್ನು ಕಳುಹಿಸುವುದಾಗಿ ಫಾದರ್‌ರವರು ಹೇಳಿದರು.

ಅದರಂತೆ ಜಾರ್ಜ್‌ರವರ ಮನೆಗೆ ರೋಸಿಯನ್ನು ಕಳುಹಿಸಿ ಕೊಡಲಾಯಿತು. ಮನೆಯ ಒಡತಿ ಮಾರ್ಗರೇಟ್‌ರವರು ರೋಸಿಯನ್ನು ಪ್ರೀತಿಯಿಂದ ಬರ ಮಾಡಿಕೊಂಡು ಕಾಫಿ ತಿಂಡಿಯನ್ನು ಕೊಟ್ಟು ನಂತರ ಅವಳು ಮಾಡಬೇಕಾದ ಕೆಲಸಗಳನ್ನು ಹೇಳಿದರು.

'ಕಿಟಕಿ ಬಾಗಿಲುಗಳನ್ನೂ, ನೆಲವನ್ನೂ ಚೆನ್ನಾಗಿ ಒರೆಸಬೇಕು. ಗೋಡೆ ಚಿತ್ರಗಳನ್ನು ಶುಚಿಗೊಳಿಸಬೇಕು. ಅಲ್ಲಲ್ಲಿ ಇಟ್ಟಿರುವ ವಿಗ್ರಹಗಳನ್ನು ಎತ್ತಿ ನವಿರಾಗಿ ಬಟ್ಟೆಯಿಂದ ಧೂಳು ತೆಗೆದು ಪುನಃ ಅದರ ಜಾಗದಲ್ಲಿಯೇ ಇಡಬೇಕು. ಊಟದ ಮನೆಯನ್ನು ಚೊಕ್ಕಟಗೊಳಿಸಿ ತಟ್ಟೆ ಬಟ್ಟಲುಗಳನ್ನು ಅದರ ಜಾಗದಲ್ಲಿ ಸರಿಯಾಗಿ ಜೋಡಿಸು, ನಂತರ ಅಡುಗೆ ಮನೆಯಲ್ಲಿ ನಿನಗೆ ಊಟವನ್ನಿಟ್ಟಿದ್ದೇನೆ. ಊಟ ಮಾಡು. ಅಡುಗೆ ಮನೆಯನ್ನು ಶುಚಿಗೊಳಿಸುವ ಹೊತ್ತಿಗೆ ನಾನು ಬರುತ್ತೇನೆ. ಈ ದಿನ ಚರ್ಚಿನಲ್ಲಿ ದೊಡ್ಡ ಸಮಾರಂಭವಿದೆ ನಾನು ಹೋಗುತ್ತೇನೆ' ಎಂದು ಹೇಳಿ ಕುದುರೆ ಗಾಡಿಯಲ್ಲಿ ಕುಳಿತು ಹೊರಟು ಹೋದರು.

ರೋಸಿ ಮನೆಯನ್ನೆಲ್ಲಾ ಚೆನ್ನಾಗಿ ನೋಡಿಕೊಂಡು ಬಂದಳು. ದೊಡ್ಡ ದೊಡ್ಡ ಕೋಣೆಗಳು, ವಿಶಾಲವಾದ ಹಜಾರ, ಒಳ್ಳೆಯ ನೆಲಹಾಸುಗಳು, ಯೇಸು, ಮೇರಿಯರ ದೊಡ್ಡ ವಿಗ್ರಹಗಳು, ಚಿತ್ರವತ್ತಾದ ಮೇಣದ ಬತ್ತಿ ಪೀಠ, ಹೂದಾನಿ, ಮನೆಮಂದಿಯ ಚಿಕ್ಕ, ದೊಡ್ಡ ಭಾವಚಿತ್ರಗಳು. ಅವಳು ಇಂತಹ ಭವ್ಯ ಬಂಗಲೆಯನ್ನು ನೋಡಿಯೇ ಇರಲಿಲ್ಲ. ಎಲ್ಲಾ ವಸ್ತುಗಳನ್ನು ಮುಟ್ಟಿ ನೋಡಿದಳು. ಮನೆಯನ್ನೆಲ್ಲಾ ಒಂದು ಸುತ್ತು ಹಾಕಿಕೊಂಡು ಬಂದಳು. ಅವಳಿಗಾಗಲೇ ಹಸಿವಾಗತೊಡಗಿತು. ಅಡುಗೆ ಮನೆಗೆ ಧಾವಿಸಿದಳು. ಅಲ್ಲಿ ಅವಳಿಗಾಗಿ ಊಟ ಸಿದ್ಧವಿತ್ತು. ಹೊಟ್ಟೆ ತುಂಬಾ ಊಟ ಮಾಡಿದಳು.

ಮಾರ್ಗರೇಟ್‌ರವರು ಬೆಳಿಗ್ಗೆ ಚರ್ಚ್‌ನ ಸಮಾರಂಭಕ್ಕೆ ಹೋಗುವ ಮುನ್ನ ರೋಸಿಯನ್ನು ಕರೆದು 'ನೀನು ಮನೆಯನ್ನು ಶುಚಿಗೊಳಿಸುವಾಗ ಏನಾದರೂ ಸಣ್ಣ ಪುಟ್ಟ ಸಾಮಾನುಗಳು ಸಿಕ್ಕರೆ ಈ ಪುಟ್ಟ ಮೇಜಿನ ಮೇಲಿಡು' ಎಂದು ಒಂದು ಪುಟ್ಟ ಮೇಜನ್ನು ತೋರಿಸಿ ಹೋಗಿದ್ದರು.

ಈಗ ಊಟ ಮಾಡಿದ ಮೇಲೆ ರೋಸಿಗೆ ಮನೆ ಕೆಲಸದ ನೆನಪು ಬಂದಿತು. ಪೊರಕೆಯನ್ನು ಹಿಡಿದು ಲಗುಬಗೆಯಿಂದ ಗುಡಿಸತೊಡಗಿದಳು. ಬಟ್ಟೆಯೊಂದನ್ನು ತೇವ ಮಾಡಿಕೊಂಡು ಕುರ್ಚಿಯನ್ನೂ ಒರಗು ದಿಂಬುಗಳನ್ನೂ ಒರೆಸಲು ಶುರು ಮಾಡಿದಳು. ಮೆತ್ತನೆಯ ದಿಂಬಿನ ಮೇಲೆ ಕೈಯಾಡಿಸುತ್ತಿರುವಂತೆಯೇ ಹಾಗೆಯೇ ನಿದ್ದೆ ಹೋದಳು.

ಕುದುರೆ ಗಾಡಿಯು ಮನೆಯ ಮುಂದೆ ಬಂದು ನಿಂತ ಶಬ್ದಕ್ಕೆ ರೋಸಿಗೆ ಎಚ್ಚರವಾಯಿತು. ದಡಬಡನೆ ಎದ್ದು ಕೈಯಲ್ಲಿ ಪೊರಕೆ, ಬಟ್ಟೆ ಹಿಡಿದುಕೊಂಡು ಓಡಾಡುತ್ತಿದ್ದಳು. ಮಾರ್ಗರೇಟ್‌ರವರು ಮನೆಯೊಳಗೊಮ್ಮೆ ಕಣ್ಣಾಡಿಸಿ ರೋಸಿಯನ್ನು ಕರೆದು 'ನಿನ್ನ ಕೆಲಸ ಮುಗಿದಿದ್ದರೆ ಹೋಗಬಹುದು. ಕೆಲಸ ಮಾಡುವಾಗ ಏನಾದರೂ ಸಣ್ಣ ಪುಟ್ಟ ಸಾಮಾನು ಸಿಕ್ಕಿತೇ?' ಎಂದು ಕೇಳಿದರು. ರೋಸಿ ಇಲ್ಲವೆಂದು ತಲೆಯಾಡಿಸಿದಳು. 'ಸರಿ ನೀನು ಇನ್ನು ಹೊರಡಬಹುದು, ನಾಳೆ ನಿನ್ನ ಗೆಳತಿ ಲಿಲ್ಲಿಯನ್ನು ಕಳುಹಿಸು' ಎಂದು ಹೇಳಿ ಆ ದಿನದ ಸಂಬಳವನ್ನು ಕೊಟ್ಟು ಕಳುಹಿಸಿದರು.

ಮಾರನೆಯ ದಿನ ಲಿಲ್ಲಿ ಬಂದಳು. ಅವಳಿಗೂ ಸಹ ತಿಂಡಿ ಕಾಫಿ ಕೊಟ್ಟು ಮನೆ ಕೆಲಸವನ್ನು ವಿವರವಾಗಿ ಹೇಳಿ 'ಊಟವನ್ನು ಅಡುಗೆ ಮನೆಯಲ್ಲಿಟ್ಟಿದ್ದೇನೆ. ಸಾಮಾನುಗಳನ್ನು ಎತ್ತಿ ಇಟ್ಟು ಶುಭ್ರ ಮಾಡುವಾಗ ಏನಾದರೂ ಸಣ್ಣಪುಟ್ಟ ಸಾಮಾನುಗಳು ಸಿಕ್ಕರೆ ಈ ಪುಟ್ಟ ಮೇಜಿನ ಮೇಲಿಡು. ನಾನು ನನ್ನ ಗೆಳತಿಯೊಬ್ಬಳ ಯೋಗಕ್ಷೇಮವನ್ನು ವಿಚಾರಿಸಿಕೊಂಡು ಬರಲು ಹೋಗುತ್ತಿದ್ದೇನೆ' ಎಂದು ಹೇಳಿ ಮಾರ್ಗರೇಟ್ ಕುದುರೆ ಗಾಡಿಯಲ್ಲಿ ಹೊರಟು ಹೋದರು.

ಲಿಲ್ಲಿ ಮನೆಯ ಯಜಮಾನಿ ಹೇಳಿದ ಕೆಲಸವನ್ನೆಲ್ಲಾ ಚೆನ್ನಾಗಿ ಮಾಡಿ ಮುಗಿಸಿ ಯಜಮಾನಿ ಬರುವುದನ್ನೇ ಕಾಯುತ್ತಾ ಕುಳಿತಿದ್ದಳು. ಮಾರ್ಗರೇಟ್ ಬಂದರು. ಮನೆಯ ಒಳಗೆಲ್ಲಾ ಕಣ್ಣಾಡಿಸಿದರು. ಕಿಟಕಿ, ಬಾಗಿಲುಗಳಲ್ಲಿ